ಕರ್ನಾಟಕ ವಿಧಾನ ಸಭೆ

ಗುರುವಾರ, ದಿನಾಂಕ ೧೨ನೇ ಫೆಬ್ರವರಿ ೧೯೮೭

ಸದನವು ವಿಧಾನಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ ೧೧ಕ್ಕೆ
ಸಮಾವೇಶಗೊಂಡಿತು.

ಮಾನ್ಯ ಅಧ್ಯಕ್ಷರು (ಶ್ರೀ ಬಿ. ಜಿ. ಬಣಕಾರ್) ಪೀಠದಲ್ಲಿದ್ದರು,

ಚುಕ್ಕೆಗುರುತಿನ ಪ್ರಶ್ನೆಗಳಿಗೆ ನೀಡಲಾದ ಬಾಯಿಮಾತಿನ ಉತ್ತರಗಳು

ವರಾಹಿ ಯೋಜನೆಯ ನಿರ್ಮಾಣದಲ್ಲಿ ಉಂಟಾಗಿರುವ ಅವ್ಯವಹಾರ ಮತ್ತು ದುರಾಡಳಿತದ ಬಗ್ಗೆ

೧೭೬(೪೧೯) ಶ್ರೀ ಗೋಪಾಲ ಪುಟ್ಟಯ್ಯ ಕಾನಡೆ (ಸಿರ್ಸಿ).—ಮಾನ್ಯ ಆರಣ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗೆ ದಯವಿಟ್ಟು ಉತ್ತರಿಸುವರೇ :—

> ವರಾಹಿ ಯೋಜನೆಯ ನಿರ್ಮಾಣದಲ್ಲಿ ನಡೆದ ಕೋಟ್ಯಾಂತರ ರೂಪಾಯಿಗಳ ಅವ್ಯವಹಾರ ಹಾಗೂ ದುರಾಡಳಿತಕ್ಕೆ ಸಂಬಂಧಿಸಿದ ಅಧಿಕಾರಿಗಳ ವಿರುದ್ಧ ಎರಡು ತಿಂಗಳಲ್ಲಿ ಕ್ರಮ ಕೈಕೊಳ್ಳುವುದಾಗಿ ಈ ಹಿಂದಿನ ಅಧಿವೇಶನದಲ್ಲಿ ಭರವಸೆ ನೀಡಿದ್ದರೂ ಈ ವರೆವಿಗೂ ಯಾವ ಕ್ರಮ ಕೈಗೊಳ್ಳದಿರಲು ಕಾರಣವೇನು ?

ಶ್ರೀ ಜೆ. ಎಸ್. ದೇಶಮುಖ್ (ಮಾನ್ಯ ಆರಣ್ಯ ಸಚಿವರು).—

> ಉನ್ನತ ಮಟ್ಟದ ಸಮಿತಿಯು ತನ್ನ ವರದಿಯನ್ನು (ಒಂದು ಅಂಶವನ್ನು ಬಿಟ್ಟು) ಸರ್ಕಾರಕ್ಕೆ ದಿನಾಂಕ ೨೯-೧-೧೯೮೭ ರಂದು ಕೊಟ್ಟಿದೆ. ಸದರಿ ವರದಿಯನ್ನು ಮುಂದಿನ ಕ್ರಮ ತೆಗೆದುಕೊಳ್ಳುವ ಸಲುವಾಗಿ ಉಪಲೋಕಾಯುಕ್ತರವರಿಗೆ ಕಳುಹಿಸಿ ಕೊಡಲಾಗಿದೆ.

ಶ್ರೀ ಜಿ. ಎಂ. ಕಾನಡೆ.—ಇದು ೧೯೭೯ನೇ ಇಸವಿಯಲ್ಲಿ ನಡೆದಿರುವಂತಹದ್ದು, ವರಾಹಿ ಯೋಜನೆಯಲ್ಲಿ ಕೋಟ್ಯಾಂತರ ರೂಪಾಯಿಗಳ ಪ್ರಕರಣ, ಅವ್ಯವಹಾರದ ಪ್ರಕರಣ. ಇದರ ಮೇಲೆ ಆಯೋಗವನ್ನು ನೇಮಿಸಲಾಗಿದ್ದು ಅದರ ವರದಿ ಬಂದಿದೆ. ಆದರೂ ಇನ್ನೊಂದು ಆಯೋಗವನ್ನು ನೇಮಿಸಲಾಗಿದೆ ಎಂಬುದಾಗಿ ಹೇಳುವುದಾದರೆ, ಒಂದೊಂದು ಪ್ರಕರಣದ ಮೇಲೆ ಎಷ್ಟೆಷ್ಟು ಆಯೋಗಗಳನ್ನು ನೇಮಿಸುತ್ತೀರಿ ? ಇದರ ಬಗ್ಗೆ ಈ ಹಿಂದೆ ನೇಮಿಸಲಾಗಿದ್ದ ಆಯೋಗ ೨೧ ಅಧಿಕಾರಿಗಳು ಭ್ರಷ್ಟಾಚಾರ ಮಾಡಿದ್ದಾರೆ. ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕು ಅವರನ್ನು ಕೂಡಲೇ ಸಸ್‌ಪೆಂಡ್ ಮಾಡಬೇಕೆಂದು ವರದಿ ಕೊಟ್ಟಿದೆ. ಅಂದಮೇಲೆ ಇದನ್ನು ಪುನಃ ಉಪ ಆಯೋಗಕ್ಕೆ ಕಳುಹಿಸುವ ಪ್ರಮೇಯವೇನು ? ಅಧಿಕಾರಿಗಳನ್ನು ಬಚಾವ್ ಮಾಡುವ ಸಲುವಾಗಿ ಈ ಕ್ರಮ ತೆಗೆದುಕೊಂಡಿದ್ದೀರಾ ? ನಾನು ಈ ಬಗ್ಗೆ ಪತ್ರ ಬರೆದಾಗ ೨ ತಿಂಗಳಲ್ಲಿ ಕ್ರಮ ತೆಗೆದುಕೊಳ್ಳುತ್ತೇನೆಂದು ಹೇಳಿದವರು, ನಾನು ಊರಿಗೆ ಹೋದ ಮೇಲೆ ೩ ತಿಂಗಳು ಆದ ಮೇಲೆ ನನ್ನ ಪತ್ರಕ್ಕೆ ಉತ್ತರ ನೀಡಿ ಇನ್ನೆರಡು ತಿಂಗಳಲ್ಲಿ ಕ್ರಮ ತೆಗೆದುಕೊಳ್ಳುತ್ತೇನೆಂದು ತಿಳಿಸಿದ್ದಾರೆ. ಆ ಅಧಿಕಾರಿಗಳು ನಿಮ್ಮ ಸಂಬಂಧಿಕರೆ ಅಥವಾ ಚುನಾವಣೆ ಸಮಯದಲ್ಲಿ ನಿಮಗೆ ಸಹಾಯ ಮಾಡುತ್ತಾರೆಂದು ಅವರನ್ನು ರಕ್ಷಣೆ ಮಾಡುತ್ತೀರಾ ? ೨-೩ ರೂಪಾಯಿಗಳನ್ನು ತಿಂದಂತಹವರ ಮೇಲೆ ಕ್ರಮ ತೆಗೆದುಕೊಂಡು ಅವರನ್ನು ಸಸ್‌ಪೆಂಡ್ ಮಾಡುತ್ತೀರಿ ? ಆದರೆ ಇವರು ಕೋಟ್ಯಾಂತರ ರೂಪಾಯಿಗಳನ್ನು ತಿಂದು ಹಾಕಿರುವುದನ್ನು ನೀವೇ ಮನಗಂಡಿದ್ದೀರಿ. ಅವರೂ ಇಂತಹವರನ್ನು ಬಚಾವ್ ಮಾಡುತ್ತಿರುವುದಕ್ಕೆ ಕಾರಣವೇನು ? ಏಕೆ ಇಂತಹವರನ್ನು ಬಚಾವ್ ಮಾಡುತ್ತೀರಾ ?

ಶ್ರೀ ಜೆ. ಎಸ್. ದೇಶ್‌ಮುಖ್.—ನಾನು ಈಗಾಗಲೇ ಹೇಳಿದಹಾಗೆ ಶಿನೇ ತಾರೀಖಿಗೆ ವರದಿ ಬಂದಿದೆ. ಅವರ ಮೇಲೆ ಏನು ಕ್ರಮ ತೆಗೆದುಕೊಳ್ಳಬೇಕು ಎನ್ನುವ ಬಗ್ಗೆ ಉಪಲೋಕಾಯುಕ್ತರಿಗೆ ಇದನ್ನು ರೆಫರ್ ಮಾಡಲಾಗಿದೆ. ಇದರಲ್ಲಿ ನನ್ನ ಸಂಬಂಧಿಕರು ಯಾರೂ ಇರುವುದಿಲ್ಲ. ಇದರಲ್ಲಿ ಯಾರನ್ನೂ ಉಳಿಸಬೇಕೆಂದು ನನಗೆ ಇಚ್ಛೆಯಾಗಲಿ ಸಹ ಇಲ್ಲ.

ಶ್ರೀ ಜಿ. ಎಂ. ಕಾನಡೆ.—ವರದಿ ಎಂಟರೆ ಒಂದು ವರ್ಷದಲ್ಲಿ ಎಷ್ಟು ತರಿಸುತ್ತೀರಿ ? ಶಾಸಕರಿಗೇನೂ ಜೇಬಿ ಇಲ್ಲವೇ ? ಅವರನ್ನು ಸಸ್ಪೆಂಡ್ ಮಾಡಬೇಕೆಂದು ಸಮಿತಿ ಕೂಡಾ ಒಪ್ಪಿದೆ. ಅವರು ಭ್ರಷ್ಟಾಚಾರಿಗಳು ಎಂದು ಹೇಳಿ.....

ಶ್ರೀ ಜೆ. ಎಚ್. ಪಟೇಲ್.—ಉಪಲೋಕಾಯುಕ್ತರಿಗೆ.....

ಶ್ರೀ ಜಿ. ಎಂ. ಕಾನಡೆ.—ನೀವು ಕಳ್ಳರನ್ನು ಬಚಾವು ಮಾಡುತ್ತೀರಾ ? ಲಂಚ ತಿನ್ನುವವರನ್ನು ಬಚಾವು ಮಾಡುತ್ತೀರಾ ?

ಶ್ರೀ ಜೆ. ಹೆಚ್. ಪಟೇಲ್.—ನಾವು ಹೇಳುವುದನ್ನು ಕೇಳಿ. ಸುಮ್ಮನೆ ಕೂಗಾಡುವುದರಿಂದ ಏನೂ ನಡೆಯುವುದಿಲ್ಲ.

(ಗೊಂದಲ)

ಶ್ರೀ ಜಿ. ಎಂ. ಕಾನಡೆ.—ನಿಮ್ಮದು ವರದಿ ಎಲ್ಲಿದೆ ?

ಶ್ರೀ ಜೆ. ಹೆಚ್. ಪಟೇಲ್.—ಪನಿಷ್‌ಮೆಂಟ್ ಬಗ್ಗೆ ಉಪಲೋಕಾಯುಕ್ತರಿಗೆ ಕಳುಹಿಸಲಾಗಿದೆ. ಇಲ್ಲಿ ಯಾರನ್ನೂ ಉಳಿಸುವ ಪ್ರಶ್ನೆ ಇಲ್ಲ. ಉಪಲೋಕಾಯುಕ್ತ ಒಂದು ಖಾಸಗೀ ಸಂಸ್ಥೆ ಅಲ್ಲ, ಆ ರೀತಿ ಯೋಚನೆಯನ್ನು ಮಾಡಬಾರದು.

ಶ್ರೀ ಜಿ. ಎಂ. ಕಾನಡೆ.—ಸಸ್ಪೆಂಡ್ ಮಾಡುತ್ತೇವೆಂದು ತೀರ್ಮಾನ.....

ಶ್ರೀ ಜೆ. ಹೆಚ್. ಪಟೇಲ್.—ಏನು ಶಿಕ್ಷೆಯನ್ನು ಅವರಿಗೆ ಕೊಡಬೇಕೆಂದು ಉಪಲೋಕಾಯುಕ್ತರವರು ಹೇಳುತ್ತಾರೋ ಆ ಶಿಕ್ಷೆಯನ್ನು ಅವರಿಗೆ ಕೊಡುತ್ತೇವೆ.

ಶ್ರೀ ಜಿ. ಎಂ. ಕಾನಡೆ.—ಏನು ಶಿಕ್ಷೆ ಕೊಡುತ್ತೀರಿ ? ೪ ವರ್ಷ ಆಯಿತು ಅಧ್ಯಕ್ಷರೇ,

ಅಧ್ಯಕ್ಷರು.—ಸಮಾಧಾನದಿಂದ ಕೇಳಿ.

ಶ್ರೀ ಜಿ. ಎಂ. ಕಾನಡೆ.—ಅವರನ್ನು ಡಿಸ್‌ಮಿಸ್ ಮಾಡುತ್ತೇವೆ, ಸಸ್ಪೆಂಡ್ ಮಾಡುತ್ತೇವೆ ಎಂದು ಹೇಳಲಿ.

ಶ್ರೀ ಜೆ. ಹೆಚ್. ಪಟೇಲ್.—ಉಪಲೋಕಾಯುಕ್ತ ಕೋರ್ಟ್ ಇದ್ದಹಾಗೆ. It is a judicial body. It can pronounce punishment, it can take action. It can recommend to the Government as to what action can be taken. ಇಷ್ಟಾ ತಿಳಿದುಕೊಳ್ಳದೇ ಇದ್ದರೆ ಹೇಗೆ ?

ಶ್ರೀ ಜಿ. ಎಂ. ಕಾನಡೆ.—ಲೋಕಾಯುಕ್ತ ಮತ್ತೆ ಉಪಲೋಕಾಯುಕ್ತರಿಗೆ.....

SRI J. H. PATEL.—Lokayukts is for Ministers and Public Representatives and Up-Lokayukta is for officers. Both are judicial bodies. ಯಾವುದೇ ಆಫೀಸರ್ ಮೇಲೆ ಛಾರ್ಜಸ್ ಇದ್ದರೆ ಆ ಬಗ್ಗೆ ಎನ್‌ಕ್ವೈರಿ ಮಾಡಲು ವಿಜಿಲೆನ್ಸ್ ಕಮಿಷನ್ ಬದಲು ಈ ಜ್ಯುಡಿಷಿಯಲ್ ಬಾಡಿ ಬಂದಿದೆ.

ಶ್ರೀ ಬಿ. ಸ್ವಾಮಿ ರಾವ್.—ಅಧ್ಯಕ್ಷರೇ, ಈ ಬಗ್ಗೆ ಪ್ರಶ್ನೆ ಕೇಳಲು ನನಗೂ ಅವಕಾಶ ಮಾಡಿಕೊಡಬೇಕು. ೮ ಸಾರಿ.....

ಅಧ್ಯಕ್ಷರು.—ಬೇರೆಯವರಿಗೆ ಅವಕಾಶ ಇಲ್ಲ.

ಶ್ರೀ ಜಿ. ಎಂ. ಕಾನಡೆ.—೧೯೮೩ನೇ ಇಸವಿಯಲ್ಲಿ ಟೆಂಡರ್ ತೆಗೆದುಕೊಂಡಿರುವವರ ಬಗ್ಗೆ, ಕಾಂಟ್ರಾಕ್ಟರ್ ಬಗ್ಗೆ ಕಪ್ಪು ಲಿಸ್ಟ್ ಮಾಡಬೇಕೆಂದು ಹೇಳಿದ್ದಾರೆ, ಆ ಬಗ್ಗೆ ಏನು ಮಾಡಿದ್ದೀರಿ ? ಉಪಲೋಕಾಯುಕ್ತದ ವ್ಯಾಪ್ತಿಯಲ್ಲಿ ಅವರೂ ಬರುತ್ತಾರಾ ?

ಶ್ರೀ ಜೆ. ಹೆಚ್. ಪಟೇಲ್.—ಮೊದಲು ಅಧಿಕಾರಿಗಳ ಬಗ್ಗೆ ಅಧಿಕಾರಿಗಳ ಬಗ್ಗೆ ಪ್ರಶ್ನೆ ಇದೆ. ಹಿಂದಿನ ಸರ್ಕಾರದಲ್ಲಿ ನಡೆದಿರತಕ್ಕ ಅವ್ಯವಹಾರದ ಒಂದು ಕತೆ. ಇದು ನಡೆದಿರಬಹುದು. ನಾವು ಯಾರನ್ನೂ ರಕ್ಷಣೆ ಮಾಡುವುದಿಲ್ಲ. ತಪ್ಪು ಮಾಡಿದವರಿಗೆ ಶಿಕ್ಷೆ ಆಗಲೇ ಬೇಕು. ೧೯೭೯ ರಿಂದ ೧೯೮೨ರವರೆಗೆ ನಮ್ಮ ಸರ್ಕಾರ ಬರುವುದಕ್ಕಿಂತಾ ಮುಂಚೆ ಇದು ನಡೆದಿದೆ. ಮಾನ್ಯ ಸದಸ್ಯರು ಇದನ್ನು ಗಮನಕ್ಕೆ ತಂದ ಮೇಲೆ ನಾವು ಸೂಕ್ತ ಕ್ರಮವನ್ನು ತೆಗೆದುಕೊಳ್ಳಬೇಕು. ಅವರು ಹೇಳಿದರೆಂದು ನೇರವಾಗಿ ನಾವು ಅವರನ್ನು ಜಪ್ತಾ ಮಾಡುವುದಕ್ಕಾಗುವುದಿಲ್ಲ. ಇವರ ಮೇಲೆ ತನಿಖೆಯಾಗಿ ತನಿಖಾ ವರದಿ ಬಂದಿದ್ದು ಅದನ್ನು ಉಪಲೋಕಾಯುಕ್ತರಿಗೆ ರೆಫರ್ ಮಾಡಲಾಗಿದೆ. ಅವರು ಎನ್‌ಕ್ವೈರಿ ಮಾಡುತ್ತಾರೆ. ಆಮೇಲೆ ಅವರು ಏನು ಶಿಕ್ಷೆ ಕೊಡಬೆಕೆಂದು ಹೇಳುತ್ತಾರೋ ಅದನ್ನು ಕೊಡುತ್ತೇವೆ.

ಶ್ರೀ ಜಿ. ಎಂ. ಕಾನಡೆ —ಎಷ್ಟು ದಿವಸಕ್ಕೆ ಕೊಡುತ್ತೀರಿ ?

ಶ್ರೀ ಜೆ. ಎಸ್. ದೇಶ್‌ಮುಖ್.—ರಿಪೋರ್ಟ್ ಬಂದ ತಕ್ಷಣ ಕೊಡುತ್ತೇವೆ.

ಶ್ರೀ ಜಿ. ಎಂ. ಕಾನಡೆ.—ಮೊದಲು ಲೋಕಾಯುಕ್ತಕ್ಕೆ ಕೊಟ್ಟಿದ್ದರು, ಈಗ ಉಪ ಲೋಕಾಯುಕ್ತಕ್ಕೆ ಕೊಟ್ಟಿದ್ದೇವೆಂದು ಹೇಳುತ್ತಿದ್ದಾರೆ. ಅಲ್ಲಿಂದ ರಿಪೋರ್ಟ್ ಯಾವಾಗ ಬರುತ್ತದೆ?

ಶ್ರೀ ಜೆ. ಎಸ್. ದೇಶಮುಖ್.—ವರದಿಯನ್ನು ಬೇಗ ಕೊಡಲಿಕ್ಕೆ ಹೇಳುತ್ತೇವೆ.

ಶ್ರೀ ಬಿ. ಸ್ವಾಮಿರಾವ್.—ಮಾನ್ಯ ಅಧ್ಯಕ್ಷರೇ.....

ಅಧ್ಯಕ್ಷರು.—ನೀವು ಭಾಷಣ ಮಾಡಬೇಡಿ. ಪ್ರಶ್ನೆ ಮಾತ್ರ ಕೇಳಿ.

ಶ್ರೀ ಬಿ. ಸ್ವಾಮಿರಾವ್.—ಇದರಲ್ಲಿ ಬಹಳ ದೊಡ್ಡ ಅವ್ಯವಹಾರ ನಡೆದಿದೆ, ಕಡೆಗೆ ರೆಫರ್ ಮಾಡಲಾಗಿತ್ತು, ಅದು ಏನಾಗಿದೆಯೋ ಗೊತ್ತಿಲ್ಲ.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಅಧ್ಯಕ್ಷರೆ, ಈ ವಿಚಾರದಲ್ಲಿ ಮೊದಲು ವಿಜಿಲೆನ್ಸ್‌ಗೆ ರೆಫರ್ ಮಾಡಲಾಗಿತ್ತು. ವಿಜಿಲೆನ್ಸ್‌ನವರು ವರದಿಯನ್ನು ಕೊಟ್ಟರು. ಇದರಲ್ಲಿ ಯಾರ್ಯಾರು ಜವಾಬ್ದಾರರು ಇದ್ದಾರೆ ಅವರನ್ನು ಗುರುತಿಸಲಿಕ್ಕೆ ಹೈ ಲೆವೆಲ್ ಕಮಿಟಿ ನೇಮಿಸಲಾಗಿತ್ತು. ಆ ಕಮಿಟಿಯವರು ಜನವರಿಯಲ್ಲಿ ತಮ್ಮ ವರದಿಯನ್ನು ಕೊಟ್ಟಿದ್ದಾರೆ. ಆ ವರದಿಯ ಆಧಾರದ ಮೇಲೆ ಉಪ ಲೋಕಾಯುಕ್ತಕ್ಕೆ ಕಳುಹಿಸಲಾಗಿದೆ. ಅವರು ಏನೇನು ಶಿಕ್ಷೆ ಕೊಡಬೇಕೆಂದು ಹೇಳುತ್ತಾರೆ ಅದನ್ನು ಸರ್ಕಾರ ಮಾಡುತ್ತದೆ. ಸರ್ಕಾರಕ್ಕೆ ವರದಿ ಬಂದಮೇಲೆ ಅವರು ಆದರಿಂದ ರಿಕವರಿ ಮಾಡಿಯೊಂದು ಹೇಳುತ್ತಾರೋ, ಸಸ್ಪೆಂಡ್ ಮಾಡಿಯೆಂದು ಹೇಳುತ್ತಾರೋ ಅವರ ಶಿಫಾರಸ್ಸು ಪ್ರಕಾರ ಸರ್ಕಾರ ನಡೆದುಕೊಳ್ಳುತ್ತದೆ.

ರಾಜ್ಯದಲ್ಲಿ ಅಣು ವಿದ್ಯುತ್ ಕೇಂದ್ರ

೪೨೧(೧೦೭) ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್.—ಮಾನ್ಯ ವಾಣಿಜ್ಯ ಕೈಗಾರಿಕಾ ಹಾಗೂ ವಿದ್ಯುತ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ:—

ಅ) ರಾಜ್ಯದಲ್ಲಿ ಅಣು ವಿದ್ಯುತ್ ಕೇಂದ್ರವನ್ನು ಸ್ಥಾಪಿಸುವ ಯೋಜನೆ ಏನಾದರೂ ಇದೆಯೆ ;

ಆ) ಹಾಗಿದ್ದಲ್ಲಿ, ಎಲ್ಲಿ ಸ್ಥಾಪಿಸಲಾಗುವುದು?

ಇ) ಈ ಬಗ್ಗೆ ಸಮೀಕ್ಷೆಗಳನ್ನೇನಾದರೂ ನಡೆಸಲಾಗಿದೆಯೆ?

ಈ) ಹಾಗಿದ್ದಲ್ಲಿ ಸಮೀಕ್ಷೆ ನಡೆಸಿರುವ ಸ್ಥಳಗಳಾವುವು, ಮತ್ತು ಯಾವ ಸ್ಥಳ ಸೂಕ್ತವೆಂದು ಸಮೀಕ್ಷೆಯಿಂದ ಕಂಡು ಬಂದಿದೆ?

ಉ) ಈ ಬಗ್ಗೆ ಕೇಂದ್ರ ಸರಕಾರದವರೊಡನೆ ಪತ್ರ ವ್ಯವಹಾರ ನಡೆಸಲಾಗಿದೆಯೆ ಮತ್ತು ಕೇಂದ್ರ ಸರಕಾರದವರ ಪ್ರತಿಕ್ರಿಯೆ ಏನು ?

ಶ್ರೀ ಜೆ.ಹೆಚ್. ಪಟೇಲ್ (ವಾಣಿಜ್ಯ ಕೈಗಾರಿಕಾ ಹಾಗೂ ವಿದ್ಯುತ್ ಮಂತ್ರಿಗಳು).—

ಅ) ಇದೆ.

ಆ) ಉತ್ತರ ಕನ್ನಡ ಜಿಲ್ಲೆಯಲ್ಲಿರುವ ಕೈಗಾದಲ್ಲಿ.

ಇ) ಕೇಂದ್ರ ಸರಕಾರ ಸಮೀಕ್ಷೆ ಮಾಡಿದೆ.